**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 997/2024**

**ಪ್ರಾಸಾಃ- 9 ಚಾಸಾಃ- 17**

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಸತೀಶ್ ರೆಡ್ಡಿ |
| ತಂದೆಯ ಹೆಸರು | : | ಅಂಜಿನಪ್ಪ ರೆಡ್ಡಿ |
| ವಯಸ್ಸು | : | 52 ವರ್ಷ |
| ವೃತ್ತಿ | : | ಮೆಡಿಕಲ್ ಆಫೀಸರ್, ವಿಮ್ಸ್ ಆಸ್ಪತ್ರೆ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 5.2.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 1998 ರಿಂದ ವಿಮ್ಸ್ ಆಸ್ಪತ್ರೆ ಬಳ್ಳಾರಿಯಲ್ಲಿ ಮೆಡಿಕಲ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 12-8-2021 ರಂದು ನಾನು ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದಾಗ ಚಾಸಾ 1, 4 ಮತ್ತು ಅವರ ಮಕ್ಕಳು ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದರು. ನಾನು ಅವರುಗಳನ್ನು ಬೆಳಿಗ್ಗೆ 11-55 ರಿಂದ ಮದ್ಯಾಹ್ನ 12-06 ರವರೆಗೆ ಚಿಕಿತ್ಸೆ ಮಾಡಿದ್ದೆ. ಚಾಸಾ 1 ವಿರೇಶ್ ಈತನಿಗೆ ಹಣೆಯ ಮೇಲೆ ಕಟ್ಟಾದ ಗಾಯ ಆಗಿತ್ತು. ಚಾಸಾ 4 ಸುಮಂಗಳಮ್ಮ ರವರಿಗೆ ತಲೆಯ ಮೇಲೆ ಕಟ್ಟಾದ ಗಾಯ ಆಗಿತ್ತು. ಅವರ ಮಗ ಶಂಕರ್ ಈತನ ಹಣೆಯ ಮೇಲೆ ಕಟ್ಟಾದ ಗಾಯ ಆಗಿತ್ತು. ಅವರ ಮಗಳು ಲಕ್ಷ್ಮಿಯ ತಲೆಯ ಮೇಲೆ ಕಟ್ಟಾದ ಗಾಯ ಆಗಿತ್ತು. ನಾನು ಎಲ್ಲಾ ಗಾಯಳುಗಳ ಎಕ್ಸ್ ರೇ ಮಾಡಿಸಿ ನೋಡಿದಾಗ ಯಾವುದೇ ಮೂಳೆ ಮುರಿತ ಕಂಡು ಬಂದಿರಲಿಲ್ಲ. ಸದರಿಯವರಿಗೆ ಆದ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿರುತ್ತವೆ. ನಾನು ಗಾಯಾಳುಗಳನ್ನು ಪರೀಕ್ಷಿಸಿದ ನಂತರ ಅವರುಗಳ ಗಾಯ ಪ್ರಮಾಣ ಪತ್ರಗಳನ್ನು ತನಿಖಾಧಿಕಾರಿಗಳಿಗೆ ನೀಡಿದ್ದೆ. ಚಾಸಾ 1 ರವರ ಗಾಯಪ್ರಮಾಣ ಪತ್ರವನ್ನು ನಿಪಿ-11 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಚಾಸಾ 4 ರವರ ಗಾಯ ಪ್ರಮಾಣ ಪತ್ರವನ್ನು ನಿಪಿ-12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ಶಂಕರ್ ನ ಗಾಯ ಪ್ರಮಾಣ ಪತ್ರವನ್ನು ನಿಪಿ-13 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಲಕ್ಮಿಳ ಗಾಯ ಪ್ರಮಾಣ ಪತ್ರವನ್ನು ನಿಪಿ-14 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ನಿಪಿ-11 ರಿಂದ 14 ರಲ್ಲಿ ನಮೂದು ಮಾಡಿರುವ ಗಾಯಗಳು ಕೊಡಲಿ, ಕುಡುಗೋಲು ಮತ್ತು ಕಲ್ಲುಗಳಿಂದ ಹಲ್ಲೆ ಮಾಡಿದ್ದಲ್ಲಿ ಆಗುವ ಸಾಧ್ಯತೆಗಳು ಇದೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ಸಿರಿಗೇರಿ ಮತ್ತು ಸಿರುಗುಪ್ಪದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ ಎಂದರೆ ಸರಿ. ನಿಪಿ-11 ರಿಂದ 14 ರಲ್ಲಿ ಗಾಯದ ವಯಸ್ಸನ್ನು ನಮೂದಿಸಿಲ್ಲ ಎಂದರೆ ಸರಿ. ತನಿಖಾಧಿಕಾರಿಗಳು ನನಗೆ ಯಾವುದೇ ಆಯುಧಗಳನ್ನು ಕಳುಹಿಸಿ ಅದರ ಬಗ್ಗೆ ವರದಿಯನ್ನು ಕೇಳಿಲ್ಲ. ದ್ವಿಚಕ್ರ ವಾಹನದಲ್ಲಿ ಹೋಗುವಾಗ ಚೂಪಾದ ವಸ್ತುಗಳ ಮೇಲೆ ಬಿದ್ದಲ್ಲಿ ನಿಪಿ11 ರಿಂದ 14 ರಲ್ಲಿ ನಮೂದು ಮಾಡಿರುವ ಗಾಯಗಳು ಆಗುವ ಸಾಧತೆ ಇದೆ ಎಂದರೆ ಸರಿ. ನಾನು ಚಾಸಾ 1 ಮತ್ತು ಇತರೇ ಗಾಯಾಳುಗಳನ್ನು ಚಿಕಿತ್ಸೆ ಮಾಡಿದ ವೈದ್ಯನಾಗಿಲ್ಲ ಎಂದರೆ ಸರಿ. ನಾನು ಗಾಯಾಳುಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಮತ್ತು ಪೋಲೀಸರಿಗೆ ಸಹಾಯ ಮಾಡಲು ಅವರ ಮಾತನ್ನು ಕೇಳಿ ಸುಳ್ಳು ಗಾಯ ಪ್ರಮಾಣ ಪತ್ರಗಳನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 997/2024**

**ಪ್ರಾಸಾಃ- 10 ಚಾಸಾಃ- 8**

| | | |
|---|---|---|
| ಸಾಕ್ಷಿಯ ಹೆಸರು | : | ಕೋರಿ ರಂಗಪ್ಪ |
| ತಂದೆಯ ಹೆಸರು | : | ಮಲ್ಲಯ್ಯ |
| ವಯಸ್ಸು | : | 45 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಊಳೂರು |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 5.2.2026**
**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 11 ನನಗೆ ಸಂಬಂಧದಲ್ಲಿ ಸಹೋದರನಾಗಬೇಕು. ಚಾಸಾ 1 ಪರಿಚಯ ಇದ್ದಾರೆ. ಚಾಸಾ 4 ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಆರೋಪಿತರು ಹಾಗೂ ಚಾಸಾ 1, 4 ರವರ ನಡುವೆ ನಡೆದ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಮತ್ತು ಅದರ ಬಗ್ಗೆ ಕೇಳಿ ಸಹ ತಿಳಿದುಕೊಂಡಿಲ್ಲ. ಆರೋಪಿತರು ಚಾಸಾ 1, 4 ಮತ್ತು ಅವರ ಮಕ್ಕಳಿಗೆ ಕುಡುಗೋಲಿನಿಂದ ಮತ್ತು ಕೊಡಲಿ, ಕಲ್ಲಿನಿಂದ ಹೊಡೆದ ಬಗ್ಗೆ ಮತ್ತು ಜಾತಿ ನಿಂದನೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಮು ಮಾ 1 ರಿಂದ 5 ನ್ನು ನಾನು ಈ ಮೊದಲು ನೋಡಿಲ್ಲ. ನಾನು ಈ ಪ್ರಕರಣದಲ್ಲಿ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ದಿಃ 12-8-2021 ರಂದು ಬೆಳಿಗ್ಗೆ 10-00 ಗಂಟೆ ಸಮಯದಲ್ಲಿ ಚಾಸಾ 1 ಮತ್ತು 4 ರವರು ಸರ್ವೆ ನಂಃ 205 ಎ ಮತ್ತು ಬಿ ರಲ್ಲಿ ಕೆಲಸ ಮಾಡುತ್ತಿದ್ದಾಗ, ಅಗಸರ ಜನಾಂಗದ ಆರೋಪಿ 1 ರಿಂದ 4, ಹರಿಜನ ಜನಾಂಗದ ಆರೋಪಿ 5

ರಿಂದ 9 ರವರು ಅಕ್ರಮ ಕೂಟ ರಚಿಸಿಕೊಂಡು ಬಂದು ಚಾಸಾ 1 ರವರ ಹೊಲದಲ್ಲಿ ಅತಿಕ್ರಮಣ ಪ್ರವೇಶ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿ 1 ಚಾಸಾ 1 ರವರಿಗೆ ಏನೇಲೇ ಮಾದಿಗ ಸೂಳೇ ಮಗನೇ ನಮ್ಮ ಹೊಲ ಬಿಟ್ಟು ಹೋಗ್ತೀಯಾ ಹಾಗೂ ತಹಸೀಲ್ದಾರ್ ರವರ ಕೇಸನ್ನು ವಾಪಾಸ್ಸು ತೆಗೆದುಕೊಳ್ಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ಆರೋಪಿ 1 ಮತ್ತು 2 ರವರು ಚಾಸಾ 1 ರವರನ್ನು ಹಿಡಿದುಕೊಂಡು ನಾವು ಹೊಡೆದರೆ ಕೇಸು ಆಗುತ್ತದೆ ಎಂದು ಜೊತೆ ಇದ್ದ ಹರಿಜನ ಜನಾಂಗದ ಆರೋಪಿ 5 ರಿಂದ 9 ರವರಿಗೆ ಚಾಸಾ 1 ಮತ್ತು 4 ಹಾಗೂ ಮಕ್ಕಳನ್ನು ಹೊಡೆದು ಸಾಯಿಸಿ ಬಿಡೋಣ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆಗ 5 ನೇ ಆರೋಪಿ ಮು ಮಾ 1 ಕೊಡಲಿಯಿಂದ ಚಾಸಾ 1 ರವರ ಹಣೆಗೆ ಮತ್ತು ಎರಡೂ ಕೈಗಳಿಗೆ ಹೊಡೆದು ರಕ್ತಗಾಯ ಪಡಿಸಿದ್ದ ಎಂದರೆ ಸರಿಯಲ್ಲ. ಆರೋಪಿ 5 ಅದೇ ಕೊಡಲಿಯನ್ನು ತಿರುಗಿಸಿ ಚಾಸಾ 1 ರವರ ಎಡ ಭುಜಕ್ಕೆ ಹೊಡೆದಿದ್ದ ಎಂದರೆ ಸರಿಯಲ್ಲ. 6 ನೇ ಆರೋಪಿ ಚಾಸಾ 1 ರವರ ಎಡ ಕೈ ತಿರುವಿದ್ದ ಎಂದರೆ ಸರಿಯಲ್ಲ. ಆರೋಪಿ 4 ಚಾಸಾ 1 ರವರಿಗೆ ಈ ಮಾದಿಗ ಸೂಳೇ ಮಗನನ್ನು ಮುಗಿಸಿಬಿಡುತ್ತೇನೆ ಎಂದು ಹೇಳಿ ಕೈಗಳಿಂದ ಹೊಡೆದಿದ್ದ ಎಂದರೆ ಸರಿಯಲ್ಲ. ಮು ಮಾ 1 ರಿಂದ 3 ನ್ನು ಆರೋಪಿತರು ಚಾಸಾ 1 ಮತ್ತು 4 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ್ದರು ಎಂದರೆ ಸರಿಯಲ್ಲ. ಮು ಮಾ 4 ಮತ್ತು 5 ಚಾಸಾ 1 ಘಟನೆ ಸಮಯದಲ್ಲಿ ತೊಟ್ಟಿದ್ದ ಬಟ್ಟೆಗಳಾಗಿವೆ ಎಂದರೆ ಸರಿಯಲ್ಲ. ನಾನು, ಚಾಸಾ 5, 6, 10 ಮತ್ತು 11 ರವರು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿ ಜಗಳ ಬಿಡಿಸಿದ್ದೆವು ಎಂದರೆ ಸರಿಯಲ್ಲ. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ದಿಃ 14-8-2021 ರಂದು ಪೋಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಿದ್ದು --- ಸದರಿ ಘಟನೆ ನಡೆದಿರುತ್ತದೆ " ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-15 ಎಂದು ಗುರುತಿಸಲಾಯಿತು.

ನಿಪಿ-15 ರಂತೆ ನಾನು ಹೇಳಿಕೆ ಕೊಟ್ಟಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಪಾಟೀ ಸವಾಲು ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**